ದಿನಾಂಕ: ಜನವರಿ 16, 2014

# ಎಎಪಿ ಪರ್ಯಾಯ ರಾಜಕಾರಣ ವಿಫಲವಾಗಿದೆ

ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಪರ್ಯಾಯ ರಾಜಕಾರಣದ ಕನಸನ್ನು ಭಾರತಕ್ಕೆ ನೀಡಲಾಗಿತ್ತು. ಆಮ್ ಆದ್ಮಿ ಪಾರ್ಟಿ(ಎಎಪಿ) ವಿಶ್ವಾಸ ಮೂಡಿಸಿದ್ದ ಪರ್ಯಾಯ ಶುದ್ಧ ರಾಜಕಾರಣದಿಂದ ಭಾರತೀಯ ಸಮಾಜದಲ್ಲಿ ಅಚ್ಚಳಿಯದ ಸುಧಾರಣೆ ಸಾಧ್ಯವೆಂಬ ವೈಯಕ್ತಿಕ ವಿಶ್ವಾಸ ನನ್ನದಾಗಿತ್ತು. ಹಿಂದಿನಿಂದಲೂ ಅಸ್ತಿತ್ವದಲ್ಲಿರುವ ರಾಜಕೀಯ ಪಕ್ಷಗಳು ಹಾಗೂ ರಾಜಕಾರಣಿಗಳು ಪ್ರಾಮಾಣಿಕತೆ ಹಾಗೂ ಹೊಣೆಗಾರಿಕೆ ಏನೆಂಬುದನ್ನು ಅವರಿಂದ ಕಲಿಯುತ್ತಾರೆ ಎಂಬ ಆಸೆಯಿತ್ತು. ಆದರೆ ಈಗ ಕೇವಲ ಪ್ರಹಸನ ಮತ್ತು ಅವ್ಯವಸ್ಥೆಯ ಮಾರ್ಗವನ್ನು ಮಾತ್ರ ದೇಶ ಎದುರುಗೊಂಡಿದೆ.

ರಾಜಕೀಯ ಪಕ್ಷ ಕಟ್ಟಿದ ನಂತರ ಅದರ ಸದಸ್ಯರನ್ನು ಮತ್ತು ಸಿದ್ಧಾಂತವನ್ನು ಶೋಧಿಸುವ ಹಿಂದೆ ಅಡಕವಾದ ಅಪಾಯ ಹುದುಗಿದೆ. ಈ ಪ್ರಕ್ರಿಯೆಯಲ್ಲಿ ಹೊಂದಾಣಿಕೆಯಾಗದ, ಸ್ವಂತ ಅಭಿಪ್ರಾಯಕ್ಕೆ ಅಂಟಿಕೊಂಡ ಸಮೂಹಗಳು ಹೊಸ ಪಕ್ಷಕ್ಕೆ ಲಗ್ಗೆಯಿಟ್ಟಿವೆ. ಬೆಂಗಳೂರಿನಲ್ಲಿ ವಿಮಾನಯಾನ ಸೇವೆಯ ಮಾಜಿ ಒಡೆಯ ಹಾಗೂ ಮುಂಬೈನ ಬ್ಯಾಂಕರ್ ಒಬ್ಬರು ಮಾರುಕಟ್ಟೆ ಆಧಾರಿತ ಅರ್ಥವ್ಯವಸ್ಥೆಯ ಪ್ರತಿಪಾದಕರಾಗಿದ್ದಾರೆ. ಛತ್ತೀಸ್‌ಘಡ್‌ನಿಂದ ಮಾವೋಗಳ ಶುಭಚಿಂತಕರೊಬ್ಬರು ಪಕ್ಷದ ಸದಸ್ಯರಾಗಿದ್ದಾರೆ. ಜವಹರ್‌ಲಾಲ್ ನೆಹರು ವಿಶ್ವವಿದ್ಯಾಲಯದಿಂದ ಬಂದವರೊಬ್ಬರು ಭಾರತದ ವಿರುದ್ಧ ದಂಗೆ ಏಳುವಂತೆ ಕಶ್ಮೀರಿ ಸಮೂಹಗಳನ್ನು ಪ್ರಚೋದಿಸುತ್ತಿದ್ದರು. ಗುಜರಾತ್ ಸರ್ಕಾರದ ವಿರುದ್ಧ ಅಮೆರಿಕಾದ ಫೆಡರಲ್ ಸಮಿತಿ ಎದುರು ಹೇಳಿಕೆ ನೀಡುವ ಬದ್ಧತೆಯನ್ನು ಈ ಸದಸ್ಯರು ಪ್ರದರ್ಶಿಸಿದ್ದಾರೆ. ಕಾಶ್ಮೀರ ಕಣಿವೆಯಲ್ಲಿ ಜನಾಭಿಮತ ಸಂಗ್ರಹಿಸಬೇಕು ಎಂದು ಮತ್ತೊರ್ವ ಪ್ರಮುಖ ಸದಸ್ಯರು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ. ಮಾವೋವಾದಿಗಳ ಉಪಟಳ ಹೆಚ್ಚಾಗಿರುವ ಪ್ರದೇಶಗಳಲ್ಲಿ ಭದ್ರತಾ ವ್ಯವಸ್ಥೆಯ ಅಗತ್ಯವಿದೆಯೆ ಎಂದು ಜನಾಭಿಪ್ರಾಯ ಕೋರುವ ಸಲಹೆಯನ್ನೂ ಇವರು ನೀಡಿದ್ದಾರೆ. ಮೋದಿ ವಿರೋಧಿ ಭಾವನೆಗಳನ್ನೇ ತನ್ನ ಖಾಯಂ ವೃತ್ತಿಮಾಡಿಕೊಂಡಿರುವ ಅಹಮದಾಬಾದ್‌ನ ಓರ್ವ ಸದಸ್ಯರು, ಸಲಿಂಗಕಾಮದ ಕುರಿತು ಪಕ್ಷದ ಅನ್ಯ ಸದಸ್ಯರ ಅಭಿಪ್ರಾಯ ತಿಳಿದುಕೊಳ್ಳುವ ಬಯಕೆ ವ್ಯಕ್ತಪಡಿಸಿದ್ದಾರೆ. ಸಲಿಂಗಕಾಮದ ಕುರಿತು ಸಾಂಪ್ರದಾಯಿಕ ಅಭಿಪ್ರಾಯ ಹೊಂದಿದವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬಾರದು ಎಂಬ ಅಭಿಪ್ರಾಯ ಆಕೆಯದ್ದಾಗಿದೆ. ನ್ಯಾಯಾಂಗದ ಕುರಿತು ಪಕ್ಷದಲ್ಲಿ ಹೊಸ ಚಿಂತನೆ ಮೂಡಿದ್ದು, ಅದರಂತೆ ನ್ಯಾಯಾಧೀಶರು ಕಾರ್ಯಾಂಗಕ್ಕೆ ಉತ್ತರದಾಯಿಗಳಾಗಬೇಕು. ನ್ಯಾಯಾಧೀಶರೊಬ್ಬರು ತಮ್ಮ ಕೆಲಸವನ್ನು ಸರಿಯಾಗಿ ನಿಭಾಯಿಸುತ್ತಿದ್ದಾರೆಯೇ ಎಂಬ ನಿರ್ಧಾರವನ್ನು ಆರೋಪಕ್ಕೆ ಒಳಗಾದ ಸಚಿವ ಮಾಡಬೇಕೆ. ಆಗ ತನ್ನ ವಿರುದ್ಧದ ತೀರ್ಪನ್ನು ಆರೋಪಿತ ಸಚಿವ ತಳ್ಳಿಹಾಕಬಹುದು. ಜನಸಮೂಹವೇ ನಿರ್ಣಯ ತೆಗೆದುಕೊಳ್ಳಬೇಕು ಎಂಬ ಪ್ರಾರಂಭಿಕ ಹುಮ್ಮಸ್ಸು ಈಗ ಕ್ಷೀಣಿಸುತ್ತಿದೆ. ಪಕ್ಷವು ಆರಂಭದಲ್ಲಿ ನೈಸರ್ಗಿಕ ಸಂಪನ್ಮೂಲಗಳು ಹಾಗೂ ವಿಮಾನನಿಲ್ದಾಣಗಳ ರಾಷ್ಟ್ರೀಕರಣ ಮತ್ತು ಹೆಚ್ಚಿನ ವಿನಾಯತಿಗಳನ್ನು ನೀಡುವ ಮೂಲಕ ತೆರಿಗೆ ಪ್ರಮಾಣ ಹೆಚ್ಚಿಸುವ ಆರ್ಥಿಕ ನೀತಿಯನ್ನು ಅನುಸರಿಸುವ ಸಂಕೇತ ನೀಡಿತ್ತು. ಸಿದ್ಧಾಂತದ ಬದಲು ಈಗ ಹುದ್ದೆಗಳ ಬಟವಾರೆಯತ್ತ ಹೆಚ್ಚಿನ ಗಮನ ಹರಿಸಲಾಗುತ್ತಿದೆ. ಇದರಿಂದ ಪಕ್ಷದ ಒಳಗೆ ಬಿರುಕು ಕಾಣುತ್ತಿದೆ.

ಇವೆಲ್ಲವು ಕೇವಲ ಮೂರು ವಾರಗಳಲ್ಲಿ ಸಂಭಿಸಿವೆ. ಈ ಪ್ರಯೋಗದ ವೈಫಲ್ಯತೆಯನ್ನು ಪ್ರಾಮಾಣಿಕತೆ ಮತ್ತು ಹೊಣೆಗಾರಿಕೆಯ ಉತ್ತುಂಗ ಮಾನದಂಡ ರೂಪಿಸಲು ಹೊರಟ ಪ್ರಯತ್ನದ ವೈಫಲ್ಯವೆಂದು ವ್ಯಾಖ್ಯಾನಿಸುವ ತಪ್ಪನ್ನು ಅನ್ಯ ಪಕ್ಷಗಳು ಮಾಡಬಾರದು ಎನ್ನುವುದೇ ನನ್ನ ಇಂಗಿತ.

✳✳✳✳✳